# ಎಷ್ಟು ಸಾಹಸವಂತ ನೀನೇ ಬಲವಂತ

ಎಷ್ಟು ಸಾಹಸವಂತ ನೀನೇ ಬಲವಂತ । ಇಷ್ಟದಾಯಕ ಭಳಿ ಭಳಿರೇ ಹನುಮಂತ ॥

ಅಟ್ಟುತ ಖಳರನು ಮೆಟ್ಟಿ ಸೀಳುತಲಿ । ಕುಟ್ಟಿ ಚಂಡಾಡಿದ ಧಿಟ್ಟ ನೀನಹುದೋ ॥ಪ ॥

ರಾಮರಪ್ಪಣೆಯಿಂದ ಶರಧಿಯ ಧಾಟಿ । ಆ ಮಹಾ ಅಸುರೆಯ ಸೀಳಿ ಬಿಸಾಟಿ ।

ಸ್ವಾಮಿ ಕಾರ್ಯವನುಕೂಲದಿ ಯೋಚಿಸಿ । ಪ್ರೇಮದಿ ನಡೆದನು ಆರೆಲೆ ಸಾಟಿ ॥೧ ॥

ದೂರದಿಂದಸುರನ ಪುರವನ್ನೆ ನೋಡಿ । ಮನದಿ ಶ್ರೀರಾಮರ ಸ್ಮರಣೆಯಾ ಮಾಡಿ ।

ಹಾರುತ ಹರುಷದಿ ವರಸಿಲಂಕಿಣಿಯನು । ವಾರಿಜ ಮುಖಿಯಳ ಕಂಡು ಮಾತಾಡಿ ॥೨ ॥

ರಾಮರ ಕ್ಷೇಮವ ರಮಣಿಗೆ ಪೇಳಿ । ತಾಮಸ ಮಾಡದೆ ಮುದ್ರಿಕೆಯ ನೀಡಿ ।

ಭೂಮಿಜೆ ಜಾನಕಿ ಕುರುಡು ನೀಡಲಾಗ । ಆ ಮಹಾವನದೊಳು ಫಲಗಳ ಬೇಡಿ ॥೩॥

ಕಣ್ಣಿಗೆ ಬೇಕಾದ ಹಣ್ಣು ಸವಿದು। ಹಣ್ಣಿನ ನೆವದಲಿ ಅಸುರರ ಬಡಿದು ।

ಟಣ್ಣನೆ ಟಣ್ಣನೆ ಹಾರಿ ನೆಗೆದಾಡುತ । ಬಣ್ಣಿಸಿ ಅಸುರರ ಬಲವನು ಮುರಿದು ॥೪॥

ಶೃಂಗಾರ ವನದಲ್ಲಿದ್ದ ರಾಕ್ಷಸರ  ಅಂಗವನಳಿಸಿದ್ಯೋ ಅತಿಶಯ ಶೂರಾ ।

ನುಂಗಿ ಅಸ್ತ್ರವನು ಅಕ್ಷಯ ಕುವರನ । ಭಂಗಿಸಿ ಬಿಸುಟಿದ್ಯೋ ಬಂದ ರಕ್ಕಸರಾ ॥೫॥

ದೂರ ಪೇಳುವರೆಲ್ಲ ರಾವಣನೊಡನೆ । ಚೀರುತ ಕರೆಸಿದ ಇಂದ್ರಜಿತುವನ್ನೆ ।

ಚೋರ ಕಪಿಯನು ಹಿಡಿದುತಾ ಎನ್ನುತ । ಶೂರರ ಕಳಿಸಿದ ನಿಜಸುತರೊಡನೆ ॥೬॥

ಪಿಡಿದನು ಇಂದ್ರಜಿತು ಕಡುಕೋಪದಿಂದ । ಹೆಡೆಮುರಿಗೆ ಕಟ್ಟಿದ ಬ್ರಹ್ಮಾಸ್ತ್ರದಿಂದ ।

ಗುಡುಗುಡು ಗುಟ್ಟುತ ಕಿಡಿಕಿಡಿಯಾಗುತ । ನಡೆದನು ಲಂಕೆಯ ಒಡೆಯನಿದ್ದಲ್ಲಿಗೆ ॥೭॥

ಕಂಡ ರಾವಣನು ಉದ್ದಂಡ ಕಪಿಯನ್ನೆ । ಮಂಡೆಯ ತೂಗುತ ಮಾತನಾಡಿಸಿದ ।

ಭಂಡು ಮಾಡದೆ ಬಿಡೆ ನೋಡು ಕಪಿಯನೆ । ಕಂಡು ದುರದುರನೆ ನಡೆದನಾಗ ॥೮॥

ಛಲವ್ಯಾಕೊ ನಿನಗಿಷ್ಟುಎಲವೋಕೋಡಗನೆ । ನೆಲೆಯಾವದ್‌ಹೇಳೋ ನಿನ್ನೊಡೆಯನ ಹೆಸರನ್ನೆ ।

ಬಲವಂತ ರಾಮರ ಬಂಟ ಬಂದಿಹೆನೋ । ಹಲವು ಮಾತ್ಯಾಕೊ ಹನುಮನೆ ನಾನು ॥ ೯ ॥

ಬಡ ರಾವಣನೆ ನಿನ್ನ ಬಡಿದು ಹಾಕುವೆನು । ಎನ್ನೊಡೆಯನಪ್ಪಣೆಯಿಲ್ಲೆಂದು ತಾಳಿದೆನು ।

ಪುಡಿಮಾಡುವೆ ಫುಲ್ಲ ರಕ್ಕಸನೆ । ತೊಡೆವೆನು ನಿನ್ನಪಣೆಯ ಅಕ್ಷರವ ॥ ೧೦ ॥

ನಿನ್ನಂತ ದೂತರು ರಾಮರ ಬಳಿಗೆ । ಇನ್ನೆಷ್ಟು ಮಂದಿಗಳುಂಟು ಹೇಳೋ ನೀತ್ವರಿಯಾ ।

ನನ್ನಂತ ದೂತರು ನಿನ್ನಂತ ಪ್ರೇತರು ಇನ್ನೂರು ಕೋಟಿ ಕೇಳರಿಯಾ ॥ ೧೧ ॥

ಕಡುಕೋಪದಿಂದಲಿ ಖೂಳ ರಾವಣನು । ಸುಡಿಸುಡಿ ಬಾಲವ ಸುತ್ತಿವಸನವನು ।

ಒಡೆಯನ ಮಾತಿಗೆ ತಡೆಬಡೆಯಿಲ್ಲದೆ । ಒಡನೆ ಮುತ್ತಿದ್ದರು ಗಡಿಮನೆಯವರು ॥ ೧೨ ॥

ತಂದಿರುವಸನವ ತಂಡ ತಂಡದಲಿ । ಒಂದೊಂದು ಮೂಟೆ ಎಂಭತ್ತು ಕೋಟಿಯಲಿ ।

ಚಂದದಿ ಹರಳಿನ ತೈಲದೊಳದ್ದಿಸಿ । ನಿಂದ ಹನುಮನು ಬಾಲವ ಬೆಳೆಸುತ ॥ ೧೩ ।

ಶಾಲುಶಕಲಾತಿಯು ಸಾಲದೆಯಿರಲು । ಬಾಲೆರ ವಸ್ತ್ರವ ಸೆಳೆದು ತಾರೆನಲು ।

ಬಾಲವ ನಿಲ್ಲಿಸಿ ಬೆಂಕಿಯನಿಡುತಲಿ । ಕಾಲ ಮೃತ್ಯುವ ಕೆಣಕಿದರಲ್ಲಿ ॥ ೧೪ ।

ಕುಣಿಕುಣಿದಾಡುತ ಕೂಗಿ ಬೊಬ್ಬಿಡುತ । ಇಣುಕಿ ನೋಡುತ ಅಸುರರನಣಕಿಸುತ ।

ಝುಣಝುಣ ಝುಣರೆನೆ ಬಾಲ ಗಂಟೆಯು ।ಮನದಿ ಶ್ರೀರಾಮರ ಪಾದವ ನೆನೆಯುತ ॥೧೫ ॥

ಮಂಗಳ ಶ್ರೀರಾಮಚಂದ್ರ ಮೂರುತಿಗೆ । ಮಂಗಳಂ ಸೀತಾದೇವಿ ಚರಣಂಗಳಿಗೆ ।

ಮಂಗಳವೆನುತ ಲಂಕೆಯ ಸುಟ್ಟು । ಲಂಘಿಸಿ ಅಸುರನ ಗಡ್ಡಕೆ ಹಿಡಿದ ॥೧೬ ॥

ಹತ್ತಿತು ಅಸುರನ ಗಡ್ಡಮೀಸೆಗಳು । ಸುತ್ತಿತು ಹೊಗೆ ಬ್ರಹ್ಮಾಂಡ ಕೋಟಿಯೊಳು ।

ಚಿತ್ತದಿರಾಮರು ಕೋಪಿಸುವರು ಎಂದು । ಚಿತ್ತದಿ ನಡೆದನು ಅಸುರನಿದ್ದೆಡೆಗೆ ॥೧೭॥

ಸೀತೆಯ ಕ್ಷೇಮವ ಶ್ರೀರಾಮರಿಗೆ ಹೇಳಿ । ಪ್ರೀತಿಯಿಂ ಕೊಟ್ಟ ಕುರುಹ ಕರದಲ್ಲಿ ।

ಸೇತುವೆ ಕಟ್ಟಿ ಚದುರಂಗ ಬಲಸಹ ಮುತ್ತಿತು ಲಂಕೆಯ ಸೂರೆಗೈಯುತಲಿ ॥೧೮॥

ವೆಗ್ಗಳವಾಯಿತು ರಾಮರ ದಂಡು । ಮುತ್ತಿತು ಲಂಕೆಯ ಕೋಟೆಯ ಕಂಡು ।

ಹೆಗ್ಗದ ಕಾಯ್ವರ ನುಗ್ಗು ಮಾಡುತಿರೆ । ಝುಗ್ಗನೆ ಪೇಳ್ದರು ರಾವಣಗಂದು ॥೧೯॥

ರಾವಣ ಮೊದಲಾದ ರಾಕ್ಷಸರ ಕೊಂದು । ಭಾವಶುದ್ಧದಲಿ ವಿಭೀಷಣಬಾಳೆಂದು ।

ದೇವಿ ಸೀತೆಯ ನೋಡಗೊಂಡಯೋಧ್ಯದಿ । ದೇವ ಶ್ರೀರಾಮರು ರಾಜ್ಯವಾಳಿದರು ॥೨೦॥

ಶಂಖದೈತ್ಯನ ಕೊಂದೆ ಶರಣು ಶರಣಯ್ಯ । ಶಂಖಾಗಿರಿಯಲಿ ನಿಂದ ಹನುಮಂತರಾಯ ।

ಪಂಕಜಾಕ್ಷ **ಹಯವದನ** ಕಟಾಕ್ಷದಿ । ಬಿಂಕದಿ ಪಡೆದೆಯೊ ಅಜಪದವಿಯನು ॥೨೧ ॥

(ವಾದಿರಾಜರ ರಚನೆ)

# ಸೇವಕ ತನದ ರುಚಿ ಏನಳದ್ಯೋ ।

ಸೇವಕ ತನದ ರುಚಿ ಏನಳದ್ಯೋ ।

ದೇವ ಹನುಮರಾಯ ವೈರಾಗ್ಯ ಬೇಡಿ ।

ಉದಧಿಲಂಘಿಸಿ ಸೀತೆಯ ಕಂಡು ಬಂದಾಗ ।ಮದುವೆಯ ಮಾಡೆನ್ನ ಬಾರದಿತ್ತೆ । ರಾಮ ।

ಪದದಿ ಪಾಷಾಣ ಪೆಣ್ಣ ಮಾಡಿದವನಿಗೆ ಇದು ಏನಾಶ್ಚರ್ಯವೋ ನೀ ಬಯಸಲೊಲ್ಲದೆ ॥೧॥

ಕ್ಷಣದೊಳು ಸಂಜೀವನ ಗಿರಿತಂದಾಗ । ಹಣ ಹೊನ್ನೊ ಬೇಡಲು ಕೊಡದಿಹನೆ ।ರಾಮ ।

ವನಜಾಕ್ಷಿ ಸಿರಿದೇವಿ ಅರಸು ಉದಾರನಿಗೆ ಘನವಾಗಿಹುದು ಏನೋ ನೀ ಬಯಸಲೊಲ್ಲದೆ ॥೨॥

ಸಾರ್ವಭೌಮನು ತಾನೆ ಮೆಚ್ಚಿ ಬಂದಾಗಲೆ । ಊರ್ವಿಯ ಬೇಡಲು ಕೊಡದಿಹನೆ । ರಾಮ।

ಸರ್ವವ ತೊರೆದು **ಶ್ರೀಪುರಂದರವಿಠಲನ್ನ** । ನಿರ್ವ್ಯಾಜ ಭಕುತಿ ಬೇಡಿ ಕೊಂಡ್ಯಲ್ಲದೆ॥೩॥

–

## ಸೂತ್ರನಾಮಕ

ಸೂತ್ರನಾಮಕ । ಸುಂದರನೇಕ । ಸೂತ್ರ ನಾಮಕ ।

ಸೂತ್ರನಾಮಕ ಸತ್ಪಾತ್ರಗರುಡ ಶಿಖಿ । ನೇತ್ರ ವಿನುತ ಶುಭಗಾತ್ರ ಪವಿತ್ರ ।

ರಾಮಪದ ಭೃಂಗಾ । ರಾವಣ ಮದ ಭಂಗಾ ಗಜಸಿಂಗಾ ।

ತಾಮಸ ಕುಲಕೆ ನೀ ಧೂಮಕೇತು । ಬುಧ ಸೌಮನ ಸಾಗ್ರಣಿಕಾಮಿತ ಫಲವೀವಾ ।

ಪಾಂಡು ನಂದನಾ ಪಾಲಿಸು ಯೆನ್ನಾ । ಖಂಡ ಪಾವನಾ ।

ಆಂದಜಾಧಿಪನ ಕಂಡು ಭಜಿಸಿ ದೋರ್ದಂಡ ಖಳಕುಲ ಚಂಡಪ್ರಚಂಡಾ ।

ಜ್ಞಾನದಾಯಕಾ ಆನಂದತೀರ್ಥ ದೀನಪೋಷಕ ।

ಭಾನುಕೋಟಿ ತೇಜವ್ಯಾಸವಿಠಲನ ।ಧ್ಯಾನದೊಳಿಹ ಮಮ ಮಾನಸ ಹಂಸಾ ॥

ರಾಗ – ದರ್ಬಾರ್ – ಆಟತಾಳ

**ರಾಮದೂತನ ಪಾದ ತಾಮರಸವ ಕಂಡ । ಆ ಮನುಜನೆ ಧನ್ಯನೋ ।**

ಶ್ರೀಮನೋಹರನಂಘ್ರಿ ಭಜಕ । ಸ್ತೋಮ ಕುಮುದಕೆ ಸೋಮನೆನಿಸುತ ।

ಭೂಮಿಯೊಳು ಯದುಗಿರಿಯ ಸೀಮೆಯ । ಕಾಮವರದೊಳು ಪ್ರೇಮದಿಂದಿಹ ।

ಕೋತಿರೂಪದಿ ರಘುನಾಥನಾಜ್ಞೆಯ ತಾಳಿ । ಪಾಥೋದಿಯ ಲಂಘಿಸಿ ।

ರಖ್ಯಾತಲಂಕೆಯ ಪೊಕ್ಕು ಶೋಧಿಸಿ । ಮಾತೆಯನು ಕಂಡೆರಗಿ ದಶಮುಖ ।

ಪೋತಖಳಕುಲವ್ರಾತ ಘಾತಿಸಿ । ಸೀತೆ ವಾರ್ತೆಯ ನಾಥಗರುಹಿದ ॥ ೧ ॥

ಪಾಂಡುಸುತನೆ । ಪ್ರಚಂಡ ಗದೆಯನೊ । ದೋರ್ದಂಡದಿ ಧರಿಸುತಲಿ ।

ಮಂಡಲದೊಳು ಭಂಡ ಕೌರವ । ಚಂಡರಿಪುಗಳ ಖಂಡಿಸಿ ।

ಶಿರ ಚಂಡನಾಡಿಸತಿಗೆ ಕರುಳಿನ । ದಂಡೆ ಮುಡಿಸಿದುದ್ದಂಡ ವಿಕ್ರಮ ॥ ೨ ॥

ಧಾರುಣಿಯೊಳು ದ್ವಿಜ । ನಾರಿ ಗರ್ಭದಿ ಬಂದು । ಮೂರೆಂದಾಶ್ರಮ ಧರಿಸಿ ।

ಧೀರ ನೀನೇಳಧಿಕ ತ್ರಿದಶ । ಸಾರಗ್ರಂಥಗಳ ವಿರಚಿಸುತ ।

ಮಹಶೂರ **ಶ್ರೀಗೋಪಾಲವಿಠಲನ** । ಚಾರುಚರಣಕೆ ಅರ್ಪಿಸಿದ ಗುರು ॥ ೩ ॥

# “ಶ್ರೀವಾದಿರಾಜ ವಿರಚಿತ ಸುಂದರಕಾಂಡ ವರ್ಣನೆ”

ರಾಗ – ಭೌಳಿ ತಾಳ – ಖಂಡಛಾಪು

ಏಳು ಮಾರುತಿ ಎಂದೆಬ್ಬಿಸಿದಳಂಜನೆಯು ।

ಶ್ರೀರಾಮರ ಸೇವೆಗೆ ಹೊತ್ತಾಯಿತೇಳೆಂದು ॥

ಸೇತುವೆಯ ಕಟ್ಟಬೇಕು ಸಮುದ್ರವನೆ ದಾಟಬೇಕು । ಸೀತೆಗುಂಗುರವನು ಕೊಡಲಿಬೇಕು ।

ಪಾತಕಿ ರಾವಣನ ವನವ ಕೀಳಬೇಕು । ಸೀತೆಯನು ರಾಮರಿಗೆ ಒಪ್ಪಿಸಲಿ ಬೇಕು ॥ ೧ ॥

ನಿಂತು ಮಾಡಲಿಬೇಕು ಅಜ್ಞಾತವಾಸವನು । ಅಂತು ಕೀಚಕರನು ಸವುರಬೇಕು ।

ಕಂತು ಪಿತನಾಜ್ಞದಿಂ ಕೊಲ್ಲಬೇಕು ಕೌರವರ । ಕುಂತಿಸುತನು ಎಂದೆನಿಸಬೇಕಯ್ಯ ॥ ೨ ॥

ಮಧ್ವರಾಯರು ಎಂದು ಪ್ರಸಿದ್ದರಾಗಲಿಬೇಕು। ಅದ್ವೈತ ಮತವನು ಗೆದ್ದು ಮುರಿಯಲುಬೇಕು ।

ಶುದ್ಧ ಮಾಡಲಿ ಬೇಕು ಸಕಲಶಾಸ್ತ್ರಗಳನೆಲ್ಲ। ಮುದ್ದು **ಹಯವದನನ** ದಾಸನೆನಿಸಬೇಕು॥ ೩॥

**ಪವನಾ ಸಂಭೂತಾವಲಿದೂ, ತವಕಾದಿ ಕಾಯಬೇಕೊ ।**

ಇವನಾರೋ ಎಂದೂದಾಸೀನ ಮಾಡದಲೆಯನ್ನಾ ॥

ಹರಿವೇಷಧರನೆ ನರಹರಿಭಕುತರ ಪೊರೆಯುವದಕ್ಕೇ ।

ಹರಿಯಂತೆವೊದಗುವಿಯೋ । ನೀನೂ ಹರಿದಾಸನು ನಾನು ॥ ೧ ॥

ಕಪಿಪಾ ಕಪಿಯಾಜ್ಞೆಯಂತೇ । ಕಪಿಲನ್ನ ಪತ್ನಿಯನ್ನೂ ।

ಕಪಿಗಳು ಹುಡುಕಿ ಮಿಡುಕಲು । ಕಾಯ್ದೆ ಆವಾಗಲೂ ॥ ೨ ॥

ಅಜಸುತನ ಶಾಪದಿಂದ । ಅಜಗರನಾದವನ ಪಾದ ।

ರಜದೀಪುನೀತನಾ ಮಾಡಿದನೇ । ಅಜಪದವಿಗೆ ಬಹನೇ ॥ ೩ ॥

ಕಲಿಯುಗದಿ ಕಪಿಗಳೆಲ್ಲ । ಕಲಿಯಾ ಭಾಧೆಗೆ ಬಳಲೀ ।

ಕಲಿ ವೈರಿಮುನಿ ಎಂದೆನಿಸಿದೇ । ಕಲಿಮಲವಾ ಕಳೆದೇ ॥ ೪ ॥

**ಗುರುಪ್ರಾಣೇಶವಿಠಲಾ** । ಗುರುವರನೆಂಬೊ ಜ್ಞಾನ ।

ಗುರುಮಧ್ವರಾಯಾ ಕರುಣಿಸೋ । ಗುರುಮತಿಯನು ಬಿಡಿಸೋ ॥ ೫ ॥